ಈ) ಜ್ಯೂನಿಯರ್ ಕಾಂಪೊಸಿಟ್ ಪ್ರೌಢಶಾಲೆಗಳನ್ನು ರಾಜ್ಯದಾದ್ಯಂತ ಪ್ರಾರಂಭ ಮಾಡಲು ಬರಬಹುದಾದ ಖರ್ಚಿನ ವೊತ್ತವೆಷ್ಟು ?

ಉ) ಏನೇ ತರಗತಿಯನ್ನು ಜ್ಯೂನಿಯರ್ ಪ್ರೌಢಶಾಲೆಯಾಗಿ ಮಾಡಲು ಯಾರಿಂದಾದರೂ ಸರ್ಕಾರಕ್ಕೆ ಮನವಿ ಬಂದಿದೆಯೇ ?

ಶ್ರೀ ಎಂ. ರಘುಪತಿ(ಶಿಕ್ಷಣ ಸಚಿವರು).—

ಅ) ೧೧೪೦ ಶಾಲೆಗಳು.

ಆ) ಸಧ್ಯಕ್ಕೆ ಇಂಥಹ ಪ್ರಸ್ತಾವನೆಯು ಇಲಾಖೆಯಂ ಮುಂದಿಲ್ಲ.

ಇ) ಹಲವು ಆಡಳಿತಾತ್ಮಕ ಹಾಗೂ ಆರ್ಥಿಕ ಕಾರಣಗಳಿಂದ ಇದು ಸಾಧ್ಯವಾಗುವುದಿಲ್ಲ.

ಈ) ವೊದಲನೆ ವರ್ಷ ರೂ. ೯, ೫೧, ೨೪, ೬೦೦ ಎರಡನೇ ವರ್ಷ ರೂ. ೧೧. ೧೪. ೯೨.೦೦೦ ಮೂರನೇ ವರ್ಷ ಮತ್ತು ನಂತರದ ಪ್ರತಿ ವರ್ಷ ರೂ. ೨೨, ೬೪, ೮೪,೦೦೦ ವೆಚ್ಚವಾಗುವುದು.

ಉ) ಹೌದು ಬಂದಿದೆ.

## ನೀರಿನ ಸರಬರಾಜು ಯೋಜನೆ

೩೮೦ ಶ್ರೀ ಕೆ. ಬಿ. ಶಾಣಪ್ಪ (ಹಹಾಬಾದ್).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು? ಉತ್ತರಿಸುವರೆ ?

ಅ) ೧೯೮೫ ರ ಮೇ ತಿಂಗಳವರೆಗೆ ಶಾಹಾಬಾದ್ ಕ್ಷೇತ್ರದಲ್ಲಿ ಒಟ್ಟು ಎಷ್ಟು ಹಳ್ಳಿಗಳಲ್ಲಿ ಕೊಳವೆ ಬಾವಿಗಳನ್ನು ಹಾಕಲಾಗಿದೆ.

ಆ) ಆ ಪೈಕಿ ಯಶಸ್ವಿಯಾದ ಹಾಗೂ ವಿಫಲಗೊಂಡ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ? ಈ ಬಗ್ಗೆ ರಾಜ್ಯಸರ್ಕಾರದಿಂದ ಹಾಗೂ ಕೇಂದ್ರದ ವತಿಯಿಂದ ವೆಚ್ಚ ಮಾಡಲಾದ ವೊತ್ತವೆಷ್ಟು ?

ಇ) ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನು ಕೈಗೊಂಡಿರುವ ಗ್ರಾಮಗಳ ಪೈಕಿ ಅರ್ಧದಷ್ಟು ಹಳ್ಳಿಗಳಿಗೆ ಪೈಪಿನ ಮೂಲಾಂತರ ನೀರು ಸರಬರಾಜು ಮಾಡುತ್ತಿದ್ದು ಇನ್ನುಳಿದ ಅರ್ಧದಷ್ಟು ಹಳ್ಳಿಗಳಿಗೆ ಈ ಸೌಕರ್ಯವನ್ನೊದಗಿಸಲು ಸರ್ಕಾರ ಯಾವ ಯೋಜನೆಯನ್ನು ಹಾಕಿಕೊಂಡಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಪಕ್ಷ ಸಚಿವರು).—

ಅ) ೯೮ ಹಳ್ಳಿಗಳಲ್ಲಿ ೬೯೨ ಕೊಳವೆ ಬಾವಿಗಳನ್ನು ಹಾಕಲಾಗಿದೆ.

ಆ) ೨೧೦ ಕೊಳವೆ ಬಾವಿಗಳು ಯಶಸ್ವಿಯಾಗಿದ್ದು ೮೨ ಕೊಳವೆ ಬಾವಿಗಳು ವಿಫಲಗೊಂಡಿವೆ.

ಇ) ರಾಜ್ಯ ಸರ್ಕಾರದಿಂದ ೩೮. ೩೪ ಲಕ್ಷ ರೂಪಾಯಿಗಳೂ, ಕೇಂದ್ರ ಸರ್ಕಾರದಿಂದ ೧೪.೨೨ ಲಕ್ಷ ರೂಪಾಯಿಗಳು ವೆಚ್ಚವಾಗಿದೆ.

ಈ) ಪರಿಶೀಲಿಸಲಾಗುವುದು.

## ರಾಜ್ಯದಲ್ಲಿರುವ ಗ್ರಾಮ ಸಹಾಯಕರು

೩೫೪. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಗ್ರಾಮ ಸಹಾಯಕರ ಸಂಖ್ಯೆ ಎಷ್ಟು ?